**ದಿನಾಂಕ:07-07-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್ ವಿ ಎಂ ವಕೀಲರಿಂದ:**

ನಾನು ಆಸ್ತಿಗಳ ಸಂಬಂಧವಾಗಿ ನಮ್ಮ ಅಣ್ಣ-ತಮ್ಮಂದಿರ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಈ ದಾವೆಯನ್ನು ಹೊರತುಪಡಿಸಿ ಇನ್ನು ಮೂರು ದಾವೆಗಳನ್ನು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ. ಈ ದಾವೆಯ ಆಸ್ತಿಯ ಸರ್ವೇ ನಂಬರ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಜಕ್ಕನಾಯಕನಕೊಪ್ಪ, ನರೇಗಲ್ಲ, ಶಂಕ್ರಿಕೊಪ್ಪ ಮತ್ತು ನೆಗಳೂರು ಗ್ರಾಮಗಳಲ್ಲಿವೆ. ಉಳಿದ ಆಸ್ತಿಗಳ ಬಗ್ಗೆ ನನಗೆ ನೆನಪಿರುವುದಿಲ್ಲ. ದಾವಾ ಆಸ್ತಿಗಳನ್ನು ನಾನು ಎಂದೂ ಸಹ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮದುವೆಯಾಗಿ 30 ವರ್ಷಗಳು ಆಗಿರುತ್ತವೆ. ಮದುವೆಯಾದ ನಂತರ ಸುಮಾರು 30 ವರ್ಷಗಳಿಂದಲೂ ಸಹ ಕಲಘಟಗಿ ತಾಲೂಕಿನ ಮುಕ್ಕಾಲ ಗ್ರಾಮದಲ್ಲಿ ವಾಸವಾಗಿರುತ್ತೇವೆ. ನನ್ನ ತಂದೆ ತಾಯಿಯವರ ಹೆಸರು ಮಲ್ಲಪ್ಪ ಮತ್ತು ಮಲ್ಲವ್ವ ಎಂಬುದಾಗಿ ಇರುತ್ತದೆ. ನನ್ನ ತಂದೆಗೆ ನಾನು, ಗೌರವ್ವ, ಕೊಂತವ್ವ ಉರ್ಫ ಶಾಂತವ್ವ, ಚಂದ್ರಪ್ಪ ಮಕ್ಕಳುಗಳು ಆಗಿರುತ್ತೇವೆ. ನನ್ನ ಅಜ್ಜ ಗದಿಗೆಪ್ಪನಿಗೆ 5 ಜನ ಮಕ್ಕಳು, 3 ಜನ ಹೆಣ್ಣು ಮಕ್ಕಳು ಇದ್ದರು. ಆ ಗಂಡು ಮಕ್ಕಳು ಎಂದರೆ ಶೇಕಪ್ಪ, ಮಹಾಲಂಗಪ್ಪ, ಮಲ್ಲಪ್ಪ, ಶಿವಲಿಂಗಪ್ಪ ಮತ್ತು ಶಂಕರಪ್ಪ ಎಂಬುವವರು ಆಗಿರುತ್ತಾರೆ. ಅದೇ ರೀತಿ ಹೆಣ್ಣು ಮಕ್ಕಳುಗಳು ಎಂದರೆ ಭಾರತವ್ವ, ಬಸವ್ವ, ಹೊಳೆವ್ವ, ಎಂಬುವವರು ಆಗಿರುತ್ತಾರೆ. ಅದೇ ರೀತಿ ಸಿದ್ದವ್ವ ಎಂಬ ಹೆಣ್ಣು ಮಗಳು ಇದ್ದಳು ಎಂದರೆ ಸರಿಯಲ್ಲ. ಮೃತ ಶಿವಲಿಂಗಪ್ಪನಿಗೆ ಇಬ್ಬರೂ ಹೆಣ್ಣು ಮಕ್ಕಳು ಮತ್ತು 5 ಜನ ಗಂಡು ಮಕ್ಕಳು ಇದ್ದರು. ಆ ಹೆಣ್ಣು ಮಕ್ಕಳುಗಳ ಹೆಸರು ಸೋನವ್ವ ಮತ್ತು ರತ್ನವ್ವ ಎಂಬುವವರು ಆಗಿರುತ್ತಾರೆ. ಗಂಡು ಮಕ್ಕಳುಗಳು ಎಂದರೆ ಶಿವಯೋಗಿ, ತಂಬಾಸಣ್ಣಿ, ಸುಬ್ಬಣ್ಣ, ಮುರಗಣ್ಣ, ಪಂಚಣ್ಣ, ಎಂಬುವವರು ಆಗಿರುತ್ತಾರೆ. ಈ ಮೇಲೆ ಹೇಳಲಾದ ವ್ಯಕ್ತಿಗಳು ಶಿವಲಿಂಗಪ್ಪನ ಕುಟುಂಬಕ್ಕ ಸೇರಿದ ವ್ಯಕ್ತಿಗಳು ಅಲ್ಲ ಎಂದರೆ ಸರಿಯಲ್ಲ. ಶಂಕರಪ್ಪನಿಗೆ ಮಕ್ಕಳುಗಳು ಇರುವುದಿಲ್ಲ. ಆತನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಕಾರಣ ಆತ ಬದುಕಿದ್ದಾನೋ ಅಥವಾ ಇಲ್ಲವೋ ಎಂಬುದನ್ನು ನನಗೆ ಗೊತ್ತಿಲ್ಲ. ಮಲ್ಲಪ್ಪನಿಗೆ ನಾಲ್ಕು ಜನ ಮಕ್ಕಳಿದ್ದು, ಅವರುಗಳೆಂದರೆ, ಕೊಂತೆವ್ವ, ಚಂದ್ರಪ್ಪ, ಶಾಂತವ್ವ ಮತ್ತು ನಾನು ಆಗಿರುತ್ತೇವೆ. ಮಹಾಲಿಂಗಪ್ಪನಿಗೂ ಸಹ ನಾಲ್ಕು ಜನ ಮಕ್ಕಳುಗಳು ಇದ್ದು, 1) ಕಸ್ತೂರವ್ವ, 2) ಈರಪ್ಪ, 3) ಶಂಕರವ್ವ, 4) ಅನುಸುಯಾ ಆಗಿರುತ್ತವೆ. ನನ್ನ ತಂದೆಯ ಸಹೋದರಿಯವರಾದ ಪಾರವ್ವ, ಬಸವಣೆವ್ವ, ಮತ್ತು ಸಿದ್ದವ್ವರವರು

ಮೃತಪಟ್ಟಿರುತ್ತಾರೆ. ಪಾರವ್ವ, ಬಸವಣೆವ್ವ, ಮತ್ತು ಸಿದ್ದವ್ವನವರ ಗಂಡು ಮತ್ತು ಮಕ್ಕಳುಗಳು ಜೀವಂತವಿದ್ದಾರೆ. ಅವರುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅವರುಗಳನ್ನು ಈ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನನ್ನ ತಂದೆ ಮೃತಪಟ್ಟ ನಂತರ ಆತನ ಹೆಸರಿನಲ್ಲಿ ಕೆಂಪು ಹಂಚಿನ ಮನೆ ಇದೆ. ಆ ಮನೆದಳದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ನಾನು ಹಾಜರುಪಡಿಸಿರುವ ಸಾಕ್ಷ್ಯ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ಓದಿ ತಿಳಿದುಕೊಂಡಿರುತ್ತೇನೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ